## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.632/2024**

ಸಿ.ಡಬ್ಲ್ಯು 10

ಪಿ.ಡಬ್ಲ್ಯು 07

ಸಾಕ್ಷಿದಾರರ ಹೆಸರು – **ಅರವಿಂದ ಶಾಂತಾರಾಮ ಶೆಟ್ಟಿ**

ತಂದೆಯ ಹೆಸರು – **ಶಾಂತಾರಾಮ ಶೆಟ್ಟಿ**

ವಯಸ್ಸು – 52 ವರ್ಷ

ಉದ್ಯೋಗ – **ಸಹಾಯಕ ಪೊಲೀಸ ಉಪ-ನಿರೀಕ್ಷಕರು, ಮಂಕಿ ಪೊಲೀಸ ಠಾಣೆ**

ವಾಸ್ತವ್ಯ – ಅಂಕೋಲಾ

(ಇಂದು ದಿನಾಂಕಃ 14-**11-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ದಿಃ **11/01/2021** ರಿಂದ ದಿಃ **02/07/2025** ಗೋಕರ್ಣ ಪೊಲೀಸ ಠಾಣೆಯಲ್ಲಿ **ಸಹಾಯಕ ಪೊಲೀಸ್ ನಿರೀಕ್ಷಕರಾಗಿ** ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25-11-2023 ರಂದು ನಾನು ಗೋಕರ್ಣ ಪೊಲೀಸ ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ನನಗೆ ಹಾಗೂ ಚಾಸಾ 24 ಹಾಗೂ ಚಾಸಾ 9, 11 ರಿಂದ 18 ರವರಿಗೆ ಕರೆದು ಗೋಕರ್ಣದ ಐ.ಬಿ. ರಸ್ತೆಯಲ್ಲಿಯ ಕಾಮತ ಫಾರ್ಮ ಹೌಸನಲ್ಲಿರುವ ಕಾಟೇಜನಲ್ಲಿ ವೇಶ್ಯಾವಾಟಿಕ ನಡೆಸುತ್ತಿದ್ದಾರೆ ಎನ್ನುವ ಖಚಿತ ಬಾತ್ಮಿಯ ವಿಷಯವನ್ನು ತಿಳಿಸಿದ್ದು, ದಾಳಿ ಮಾಡಲು

ತನ್ನ ಜೊತೆಗೆ ಸಹಕರಿಸಲು ತಿಳಿಸಿದಂತೆ ಚಾಸಾ 11 ರವರ ಮುಖಾಂತರ ಚಾಸಾ 2 ಹಾಗೂ 3 ರವರನ್ನು ಪಂಚರನ್ನು ಬರಮಾಡಿಕೊಂಡು, ಠಾಣೆಯಿಂದ ಚಾಸಾ 1 ರಿಂದ 3 ರವರು ಹಾಗೂ ಚಾಸಾ 11 ರವರು ತಮ್ಮ ಜೀಪನಲ್ಲಿ ಕರೆದುಕೊಂಡು ಹೋಗಿದ್ದು, ನಮ್ಮ ನಮ್ಮ ಬೈಕಿನಲ್ಲಿ ಬರುವಂತೆ ತಿಳಿಸಿರುತ್ತಾರೆ. ಆಗ 01-00 ಗಂಟೆ ಆಗಿರುತ್ತದೆ. ನಾವು ಐ.ಬಿ ರಸ್ತೆಯ ಮೂಲಕ ಪುಣ್ಯಾಶ್ರಮ ಲಾಡ್ಜ ನಿಂದ ಎದುರು ಬಂದು ಹಳೇಯ ಐಬಿ ರಸ್ತೆಯಿಂದ ಹೊರಟು ಇಳಿಜಾರಿನ ಕಚ್ಚಾ ರಸ್ತೆಯಿಂದ ಹೊರಟು ಕಾಮತ್ ಫಾರ್ಮ ಹೌಸಗೆ ಹೋಗುವ ಗೇಟಿನ ಹತ್ತಿರ ಬಂದಾಗ ನಮ್ಮ ವಾಹನವನ್ನು ನಿಲ್ಲಿಸಿದ್ದೇವು. ಆಗ ಅಲ್ಲಿ ಇದ್ದ ಇಬ್ಬರು ಗಂಡಸು ಹಾಗೂ ಒಬ್ಬ ಮಹಿಳೆಯು ನಮ್ಮನ್ನು ನೋಡಿ ಕೂಡಲೇ ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿದ್ದು, ಆಗ ಅವರನ್ನು ಚಾಸಾ 24 ಹಾಗೂ ಚಾಸಾ 11 ಹಾಗೂ 12 ರವರು ಓಡಿ ಹೋದ ವ್ಯಕ್ತಿಗಳನ್ನು ಹಿಡಿದಿರುತ್ತಾರೆ. ನಂತರ ಹಿಡಿದ ಮೂರು ಜನರನ್ನು ಚಾಸಾ 1 ರವರಲ್ಲಿಗೆ ಕರೆದುಕೊಂಡು ಬಂದಾಗ ಚಾಸಾ 12 ರವರು ಒಬ್ಬ ವ್ಯಕ್ತಿಯನ್ನು ಹಿಡಿದಿದ್ದು, ಆತನ ಹೆಸರನ್ನು ಪಂಚರ ಸಮಕ್ಷಮ ವಿಚಾರಿಸಿದಾಗ ಆತನ ಹೆಸರು ರಫಿಉಲ್ಲಾ ಸಾಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾನೆ. ಚಾಸಾ 11 ರವರು ಹಿಡಿದಿರಿರುವ ವ್ಯಕ್ತಿಯ ಹೆಸರು ಹಾಗೂ ವಿಳಾಸವನ್ನು ವಿಚಾರಿಸಲಾಗಿ ಆತನ ಹೆಸರು ಸಚಿನ ನಾಗಭೂಷಣ ಆಚಾರಿ, ಸಾಃ ಗೋಕರ್ಣ ಎಂದು ತಿಳಿಸಿರುತ್ತಾರೆ. ಚಾಸಾ 24 ರವರು ಹಿಡಿದ ವ್ಯಕ್ತಿಯ ಹೆಸರನ್ನು ವಿಚಾರಿಸಿದಾಗ ಹರ್ಷಿದಾ ಬಾನು, ಸಾಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾರೆ. ಆಗ ಚಾಸಾ 1 ರವರಟು ನಮ್ಮನ್ನು ನೋಡಿ ಯಾಕೆ ಓಡಿ ಹೋಗಿರುತ್ತೀರಿ ಎಂದು ಕೇಳಿದಾಗ ಈ ಬಗ್ಗೆ ಪ್ರಶ್ನಿಸಿದಾಗ ಯಾವುದೇ ಉತ್ತರನ್ನು ನೀಡಲಿಲ್ಲ. ನಾವು ಅವರನ್ನು ವಿಚಾರಿಸಿದಾಗ ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ನಾವು ಕೂಡಲೇ ಪಂಚರ ಸಮಕ್ಷಮ ಕಾಮತ ಫಾರ್ಮ ಹೌಸನ ಕಾಟೇಜಗಳನ್ನು ಪರಿಶೀಲಿಸಲಾಗಿ ಪೂರ್ವ ಬದಿಯ ಕಾಟೇಜನಲ್ಲಿ ಪರಿಶೀಲಿಸಿದಾಗ ಒಂದು ಗಂಡಸು ಹಾಗೂ ಒಂದು ಹೆಂಗಸು ಇದ್ದು, ಅವರ ಹೆಸರನ್ನು ವಿಚಾರಿಸಲಾಗಿ ತುಕಾರಾಮ ಓಮು ಕುಡ್ತಳಕರ, ಸಾಃ ಅಂಕೋಲಾ ಎಂದು ತಿಳಿಸಿರುತ್ತಾರೆ. ಆತನ ಜೊತೆಗೆ ಇದ್ದ ಸಂತ್ರಸ್ತ ಮಹಿಳೆಯ ಹೆಸರನ್ನು ವಿಚಾರಿಸಲಾಗಿ ಸಯರಾ ಖಾತೂನ ತಂದೆ ಜಾನ್ ಮಹಮ್ಮದ ಸಾಬ ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 4 ರವರು ತಮಗೆ ಹಣದ ತೊಂದರೆ ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದ್ದು ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಚಾಸಾ 4 ರವರನ್ನು ವಿಚಾರಿಸಿದಾಗ ಅವಳು ರಾತ್ರಿ 01-00 ಗಂಟೆಗೆ ಬಂದಿವುರುದಾಗಿ ತಿಳಿಸಿರುತ್ತಾಳೆ. ಕಾಟೇಜನ್ನು ಪರಿಶೀಲಿಸಲಾಗಿ ಅಲ್ಲಿ ಒಂದು ಕಾಂಡಮ ಸಿಕ್ಕಿರುತ್ತದೆ. ಚಾಸಾ 1 ರವರು ಈ ಕುರಿತಾಗಿ ವಿಚಾರಿಸಿದಾಗ ಚಾಸಾ 8 ರವರು 2ನೇ ಗಿರಾಕಿಯಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಅತನಿಂದ ಪಡೆದ 2000/- ರೂಪಾಯಿಗಳನ್ನು 2ನೇ ಆರೋಪಿತಳಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ.

ನಂತರ ಕಾಟೇಟನ ಇನ್ನೋಂದು ರೂಮನ್ನು ಪರಿಶೀಲಿಸಿದಾಗ ಒಂದು ಗಂಡಸು ಹಾಗೂ ಒಂದು ಹೆಂಗಸು ಅವರ ಹೆಸರನ್ನು ವಿಚಾರಿಸಲಾಗಿ ಚಂದ್ರಕಾಂತ ತಿಮ್ಮಪ್ಪ ತಾಂಡೇಲ, ಸಾಃ ಅಂಕೋಲಾ ಎಂದು ತಿಳಿಸಿರುತ್ತಾರೆ. ಆತನ ಜೊತೆಗೆ ಇದ್ದ ಸಂತ್ರಸ್ತ ಮಹಿಳೆಯ ಹೆಸರನ್ನು ವಿಚಾರಿಸಲಾಗಿ ಅಶ್ವಿನಿ ಎಚ್ ವಿ, ಗಂಡ ಸ್ವಾಮಿ ಸಾಃ ಮೈಸೂರು ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 5 ರವರು ತಮಗೆ ಹಣದ ತೊಂದರೆ ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದ್ದು

ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಆ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಆತನು 2ನೇ ಗಿರಾಕಿಯಾಗಿದ್ದು, ಆತನು ತನಗೆ ರೂ.2500-00 ನೀಡಿದ್ದು, ಸದ್ರಿ ಹಣವನ್ನು 2ನೇ ಆರೋಪಿತಳಿಗೆ ನೀಡಿರುವುದಾಗಿ ತಿಳಿಸಿರುತ್ತಾಳೆ. ಕಾಟೇಜನ್ನು ಪರಿಶೀಲಿಸಲಾಗಿ ಅಲ್ಲಿ ಎರಡು ಕಾಂಡಮ ಸಿಕ್ಕಿರುತ್ತದೆ.

ನಂತರ ಕಾಟೇಟನ ಇನ್ನೊಂದು ರೂಮನ್ನು ಪರಿಶೀಲಿಸಿದಾಗ ಅಲ್ಲಿ ಒಂದು ಹೆಂಗಸು ಇದ್ದು ಆಕೆಯ ಹೆಸರನ್ನು ವಿಚಾರಿಸಲಾಗಿ ಮಂಜುಳಾ ಕೋಂ ದೇವೆಂದ್ರ ಸಾಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 6 ರವರು ತಮಗೆ ಹಣದ ತೊಂದರೆ ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದ್ದು ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ನೋಂದ ಮಹಿಳೆಯರನ್ನು ಆರೋಪಿತರು ವೇಶ್ಯಾವಾಟಿಕೆಗೆ ಬಳಸುವ ಉದ್ದೇಶವನ್ನು ಹೊಂದಿರುವುದು ಕಂಡು ಬಂದಿರುತ್ತದೆ.

ಚಾ.ಸಾ.1 ಹಾಗೂ 2 ರವರ ಸಮಕ್ಷಮ 2ನೇ ಆರೋಪಿತಳ ಬಳಿ ರೂ.6500/- ರೂಪಾಯಿಗಳು ಹಾಗೂ ಕೀ ಪ್ಯಾಡ್ ಮೊಬೈಲನ್ನು ವಶಪಡಿಸಿಕೊಂಡಿರುತ್ತೇವೆ. 1ನೇ ಆರೋಪಿ ಹಾಗೂ 3ನೇ ಆರೋಪಿಯಿಂದ ತಲಾ ಒಂದೊಂದು ಮೊಬೈಲನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಚಾಸಾ 1 ರವರು 1ನೇ ಆರೋಪಿಯ ಬಳಿ ಇಲ್ಲಿಗೆ ಹೇಗೆ ಬಂದಿರುವಿರಿ ಎಂದು ತನ್ನ ಬಳಿ ಮಹಿಳೆಯನ್ನು ಹೇಗೆ ಕರೆದುಕೊಂಡು ಬಂದಿರುವಿರಿ ಎಂದು ಕೇಳಿದಾಗ ಆತನು ಅಲ್ಲೇ ಹತ್ತಿರದಲ್ಲಿ ಇದ್ದ ಇನೋವಾ ವಾಹನದ ಮುಖಾಂತರ ಬಂದಿರುವುದಾಗಿ ತಿಳಿಸಿದ್ದು ಅದನ್ನು ಮುಂದಿನ ಕ್ರಮಕ್ಕಾಗಿ ಜಪ್ತುಪಡಿಸಿಕೊಂಡಿರುತ್ತೇವೆ. ಇಲ್ಲಿ 1 ರಿಂದ 3ನೇ ಆರೋಪಿತರು ವೇಶ್ಯಾವಾಟಿಕೆ ದಂಧೆಯಲ್ಲಿ ತಮ್ಮ ಕಂಡು ಬಂದಿರುವುದರಿಂದ ಸ್ಥಳದಲ್ಲಿ ಚಾಸಾ 2 ಹಾಗೂ 3 ರವರ ಸಮಕ್ಷಮ

ಪಂಚನಾಮೆಯನ್ನು ಮಧ್ಯಾಹ್ನ 01-15 ಗಂಟೆಯಿಂದ 03-15 ರವರೆಗೆ ಜರುಗಿಸಿಸಿರುತ್ತೇವೆ. ಈ ಕುರಿತಾಗಿ ದಾಳಿಗೆ ಸಹಕರಿಸಿರುತ್ತೇನೆ. ಸಾಕ್ಷಿಯು ನಿಪಿ 1 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ1ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ3 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ 1 ರವರು ಈ ಕುರಿತಾಗಿ ಠಾಣೆಗೆ ಬಂದು ಆರೋಪಿತರ ವಿರುದ್ಧ ಸರಕಾರದ ಪರವಾಗಿ ದೂರನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದ ಕುರಿತಾಗಿ ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿದ್ದು ಈ ಪ್ರಕರಣದಲ್ಲಿ ವಿವಿಧ ಸಾಕ್ಷಿದಾರರ ಹೇಳಿಕೆಯನ್ನು ತನಿಖಾಧಿಕಾರಿಯು ದಾಖಲಿಸುವ ಸಂದರ್ಭದಲ್ಲಿ ಗಣಕೀಕೃತ ಗೊಳಿಸಿರುತ್ತೇನೆ.

**<u>ಪಾಟೀ ಸವಾಲು - 1 ಹಾಗೂ 2ನೇ ಆರೋಪಿ ಪರ ಶ್ರೀ.ಎಸ್.ಜೆ.ಎನ್. ವಕೀಲರಿಂದ</u>**

ನಾನು ಘಟನೆ ನಡೆದಿದೆ ಎನ್ನಲಾದ ದಿನ ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದೇ ಎನ್ನುವ ಕುರಿತಾಗಿ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಠಾಣೆಯಲ್ಲಿ ಇದ್ದು ತನಿಖಾಧಿಕಾರಿ ಹಾಜರುಪಡಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರಟು ನನ್ನ ಮೇಲಾಧಿಕಾರಿ ಎಂದರೆ ಸರಿ. ಅವರು ಹೇಳಿದಂತೆ ನಾನು ನಡೆದುಕೊಳ್ಳಬೇಕು ಎಂದರೆ ಸರಿ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಯಾವುದೇ ಮಾಹಿತಿಯನ್ನು ನಮ್ಮ ಠಾಣಾ ದಿನಚರಿಯಲ್ಲಿ ನಮೂದಿಸಲಿಲ್ಲ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನನ್ನ ದಿನಚರಿಯಲ್ಲಿ ಈ ಕುರಿತಾಗಿ ನಮೂದು ಮಾಡಿರುವುದಿಲ್ಲ.

ಘಟನಾ ಸ್ಥಳಕ್ಕೆ ನಾನು ಈ ಮೊದಲು ಕರ್ನಾಟಕ ಸರಕಾರದ ಸುತ್ತೋಲೆಗಳು ಬಂದಂತಹ ಸಂದರ್ಭದಲ್ಲಿ ಅವುಗಳನ್ನು ಪರಿಶೀಲಿಸಲು ಹೋಗಿರುತ್ತೇನೆ. ಈ ಕುರಿತಾಗಿ ಹೋದ ಮಾಹಿತಿಗಳನ್ನು ನಾನು ನನ್ನ ದಿನಚರಿಯಲ್ಲಿ ನಮೂದು ಮಾಡುತ್ತೇನೆ ಎಂದರೆ ಸರಿ. ನನಗೆ ಆಗ ಆರೋಪಿತರನ್ನು ಅಲ್ಲಿ ನೋಡಿದ ಬಗ್ಗೆ ನೆನಪಿಗೆ ಬರುತ್ತಿಲ್ಲ. ಕಾಮತ್ ಫಾರ್ಮ ಹೌಸ್ ನ ಮಾಲೀಕರು ಯಾರು ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಹೇಳಿಕೆಯಲ್ಲಿ ಕಾಮತ್ ಫಾರ್ಮ ಹೌಸ್ ನಮ್ಮ ಠಾಣೆಯಿಂದ ಎಷ್ಟು ದೂರದಲ್ಲಿ ಇದ್ದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಕಾಮತ್ ಫಾರ್ಮ ಹೌಸ್ ಗೆ ಹೋಗಲು ನಾಲ್ಕು ದಿಕ್ಕುಗಳಿಂದ ದಾರಿ ಇದೆ ಎಂದರೆ ಸಾಕ್ಷಿಯು ವಾಹನ ಹೋಗುವ ದಾರಿ ನನಗೆ ತಿಳಿದಿರುತ್ತದೆ. ಇತರೇ ದಾರಿಗಳ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಐಬಿ ರಸ್ತೆಯಿಂದ ಕಾಮತ್ ಫಾರ್ಮ ಹೌಸ್‌ಗೆ ವಾಹನ ಹೋಗಲು ಒಂದೇ ದಾರಿ ಇರುತ್ತದೆ. ನಮ್ಮ ವಾಹನದ ಸಂಖ್ಯೆಯನ್ನು ನನ್ನ ಹೇಳಿಕೆಯಲ್ಲಿ ನಮೂದಿಸಲಿಲ್ಲ ಎಂದರೆ ಸರಿ. ನಮ್ಮ ವಾಹನವು ಘಟನಾ ಸ್ಥಳದಿಂದ ದೂರದಲ್ಲಿ ಇರುವುದರಿಂದ ಕಾಣುವುದಿಲ್ಲ. ನಾವು ನಮ್ಮ ವಾಹನವನ್ನು ಎಷ್ಟು ದೂರದಲ್ಲಿ ಇಟ್ಟಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ ಹಾಗೂ ಉಳಿದ ವಾಹನವನ್ನು ನಾನು 100 ಮೀಟರ ದೂರದಲ್ಲಿ ಇಟ್ಟಿರುತ್ತಾರೆ. ನಾವು ಎಷ್ಟು ವಾಹನಗಳನ್ನು ತೆಗೆದುಕೊಂಡು ಹೋಗಿದ್ದೇವೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ಯಾವ ದಿಕ್ಕಿನಲ್ಲಿ ಇಟ್ಟಿದ್ದೇವೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ನಿಲ್ಲಿಸಿ ಘಟನಾ ಸ್ಥಳದಲ್ಲಿ ವಾಚ್ ಮಾಡಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಆಪಾದಿತರು ನಮ್ಮನ್ನು ನೋಡಿ ಓಡಿರುವುದರಿಂದ ನಮಗೆ ಕಾಯುವ ಪ್ರಮೇಯ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾವು ಕಾಮತ್ ಫಾರ್ಮ ಹೌಸ್‌ನ್ನು ಸುತ್ತುಕಟ್ಟಿ ದಾಳಿ ಮಾಡುವ ಅವಶ್ಯಕತೆ ಕಂಡು ಬಂದಿರುವುದಿಲ್ಲ. ಯಾವ ಆರೋಪಿತರನು ಯಾವ ಯಾವ ದಿಕ್ಕಿಗೆ ಎಷ್ಟು ದೂರಕ್ಕೆ ಓಡಿ ಹೋಗಿರುತ್ತಾರೆ ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಓಡಿ ಹೋದ ವ್ಯಕ್ತಿಗಳ ಚಹರೆಗಳನ್ನು ನಾನು ಸದ್ರಿ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಯಾವ ಯಾವ ಸಿಬ್ಬಂದಿಗಳು ಯಾರನ್ನು ಹಿಡಿದುಕೊಂಡು ಬಂದಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ದಾಳಿಗೆ ಸಹಾಯ ಮಾಡಿರುತ್ತೇನೆ. ನಾವು ನನ್ನ ದಾಳಿಯ ಸಂದರ್ಭದಲ್ಲಿ ಯಾರನ್ನೂ ಸಹ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವುದನ್ನು ನೋಡಿರುವುದಿಲ್ಲ ಎಂದರೆ ಸರಿ.

ಘಟನಾ ಸ್ಥಳದ ಕಾಟೇಜನಲ್ಲಿ ಎಷ್ಟು ಜನ ಇದ್ದರು ಎಂಬುವುದನ್ನು ನಾವು ಪರೀಕ್ಷಿಸಿರುವುದಿಲ್ಲ ಎಂದರಿ ಸರಿ. ನಿಪಿ 1 ನ್ನು ತಯಾರಿಸುವ ಪೂರ್ವದಲ್ಲಿ ನಮ್ಮ ಅಂಗ ಜಪ್ತಿಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಮು.ಮಾ.2 ಹಾಗೂ 3 ಎಲ್ಲಾ ಕಡೆಗಳಲ್ಲಿ ಮಾರಾಟಕ್ಕೆ ಸಿಗುತ್ತವೆ ಎಂದರೆ ಸರಿ. ಮು.ಮಾ 2 ನ್ನು ಯಾರೂ ಬೇಕಾದರೂ ಖರೀದಿ ಮಾಡಬಹುದು ಎಂದರೆ ಸರಿ. ಮು.ಮಾ 1 ಎಲ್ಲರ ತಾಬಾ ಇರುತ್ತದೆ ಎಂದರೆ ಸರಿ. ಚಾಸಾ 7 ಹಾಗೂ 8 ರವರಿಂದ ಎಷ್ಟು ಹಣವನ್ನು ಜಪ್ತುಪಡಿಸಿಕೊಂಡಿದ್ದೇವೆ ಎಂಬ ಬಗ್ಗೆ ಎಲ್ಲೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರಿತೀಯಾಗಿ ಚಾಸಾ 4 ರಿಂದ 6 ರವರ ಬಳಿ ಎಷ್ಟು ಹಣವನ್ನು ಜಪ್ತುಪಡಿಸಿಕೊಂಡಿದ್ದೇವೆ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

ಮು.ಮಾ 3 ಎಲ್ಲಾ ಕಡೆಗಳಲ್ಲೂ ಸಿಗುತ್ತವೆ ಎಂದರೆ ಸರಿ. ಕಾಮತ್ ಫಾರ್ಮ ಹೌಸ್‌ಗೆ ಸಂಬಂಧಿಸಿದಂತಹ ರಜಿಸ್ಟರಗಳನ್ನು ಚಾಸಾ 1 ರವರು ವಶಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಚಾಸಾ 1 ರವರಿಗೆ ಈ ಕುರಿತಾಗಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ.

ಮು.ಮಾ.2 ಘಟನಾ ಸ್ಥಳದಲ್ಲಿ ಸಿಕ್ಕಿತ್ತು ಎಂಬ ಕಾರಣಕ್ಕಾಗಿ ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿತ್ತು ಎಂಬುವುದು ಊಹಿಸಲು ಸಾಧ್ಯವಿಲ್ಲ ಎಂದರೆ ಸರಿ. ಕಾಮತ್ ಫಾರ್ಮ ಹೌಸ್ ಎಂಬ ಯಾವುದೇ ಫಾರ್ಮ ಹೌಸ್ ಇಲ್ಲ ಎಂದರೆ ಸರಿಯಲ್ಲ. 1 ರಿಂದ 3ನೇ ಆರೋಪಿತರು ಸದ್ರಿ ಫಾರ್ಮ ಹೌಸ್‌ನಲ್ಲಿ ರಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಗೋಕರ್ಣ ಪ್ರವಾಸಿ ತಾಣ ಎಂದರೆ ಸರಿ. ಗೋಕರ್ಣಕ್ಕೆ ಬಂದ ಬಡ ಪ್ರವಾಸಿಗರನ್ನು ಹಿಡಿದುಕೊಂಡು ಠಾಣಾ ಅಂಕಿ ಸಂಖ್ಯೆಗಾಗಿ ಚಾಸಾ 1 ರವರು ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ 4 ರಿಂದ 6 ರವರು ಹಾಗೂ ಆರೋಪಿತರು ಫಾರ್ಮ ಹೌಸನಲ್ಲಿ ಸಿಗಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು -3 ನೇ ಆರೋಪಿ ಪರ ಶ್ರೀ.ಎಮ್.ಜಿ.ಎಸ್. ವಕೀಲರಿಂದ**

ದಿನಾಂಕಃ 25/11/2023 ರಂದು ಠಾಣಾಧಿಕಾರಿಯಾಗಿ ಚಾ.ಸಾ.1 ರವರು ಇದ್ದರು. ಆದ್ದರಿಂದ ಠಾಣಾ ದಿನಚರಿಯೂ ಸಹ ಅವರ ವಶದಲ್ಲಿತ್ತು ಎಂದರೆ ಸರಿ. ಚಾಸಾ 1 ರವರು ಠಾಣಾ ಪ್ರಭಾರವನ್ನು ಎಷ್ಟು ಗಂಟೆಗೆ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಠಾಣಾ ದಿನಚರಿಯಲ್ಲಿ ಕಾಲ ಕಾಲಕ್ಕೆ ಠಾಣಾ ಸಿಬ್ಬಂದಿಗಳ ಸಂಖ್ಯೆಯನ್ನು ನಮೂದು ಮಾಡುವುದು ಠಾಣಾಧಿಕಾರಿಯ ಕರ್ತವ್ಯ ಎಂದರೆ ಸರಿ. ಗೋಕರ್ಣ ಪೊಲೀಸ ಠಾಣಾ ವ್ಯಾಪ್ತಿಯು 17 ಕಿಮೀ ವ್ಯಾಪ್ತಿ ಹೊಂದಿದೆ ಎಂದರೆ ಸರಿ. ನಮ್ಮ ಠಾಣಾ ವ್ಯಾಪ್ತಿಯಲ್ಲಿ ಒಂದು ಔಟ್ ಪೋಸ್ಟ ಬರುತ್ತದೆ

ಎಂದರೆ ಸರಿ. ಚಾಸಾ 9 ಹಾಗೂ 11 ರಿಂದ 18 ರವರು ನಿಖರವಾಗಿ ಎಷ್ಟೆಷ್ಟು ಗಂಟೆಗೆ ಬಂದಿದ್ದಾರೆ ಎಂಬ ಬಗ್ಗೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಚಾಸ 1 ರವರು ಎಲ್ಲರನ್ನೂ ಸಹ 12-45 ಗಂಟೆಗೆ ಕರೆದಿರುತ್ತಾರೆ. 12-45 ಗಂಟೆಗೆ ಠಾಣಾ ದಿನಚರಿಯಲ್ಲಿ 12-45 ಗಂಟೆಗೆ ದಾಳಿಗೆ ಹೋಗಿದೆ ಎನ್ನಲಾದ ಎಲ್ಲಾ ಸಿಬ್ಬಂದಿಗಳು ಠಾಣೆಯಲ್ಲಿ ಇದ್ದ ಬಗ್ಗೆ ನಮೂದು ಆಗಿರುವ ಕುರಿತು ನಾನು ನೋಡಿರುವುದಿಲ್ಲ.

ಚಾಸಾ 25 ರವರು ನಾನು ಹೇಳಿಕೆಯನ್ನು ನೀಡುವ ಸಂದರ್ಭದಲ್ಲಿ ಘಟನಾ ದಿನದಂದು 12-45 ಗಂಟೆಗೆ ನಾನು ಠಾಣೆಯಲ್ಲಿ ಇದ್ದ ಬಗ್ಗೆ ನನ್ನಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಠಾಣೆಗೆ ಹೋಗಿದ್ದೇನೆ ಎನ್ನಲಾದ ದಿನ ಹಾಗೂ ನಾನು ಹೇಳಿಕೆಯನ್ನು ನೀಡಿದ್ದೇನೆ ಎನ್ನಲಾದ ದಿನದ ನಡುವೆ ಸಾಕಷ್ಟು ದಿನಗಳ ಅಂತರ ಇರುತ್ತದೆ ಎಂದರೆ ಸರಿ. ಸದ್ರಿ ಅಂತರಗಳ ನಡುವೆ ಗೋಕರ್ಣ ಪೊಲೀಸ ಠಾಣೆಯಲ್ಲಿ ಕೆಲವೊಂದು ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ. ಮನುಷ್ಯರ ನೆನಪಿನ ಶಕ್ತಿ ದಿನದಿಂದ ದಿನಕ್ಕೆ ವ್ಯತ್ಯಾಸವಾಗುತ್ತದೆ ಎಂದರೆ ಸಾಕ್ಷಿಯು ಸದ್ರಿ ವಿಷಯವು ಮನುಷ್ಯನ ಮನಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ ಎಂದು ನುಡಿಯುತ್ತಾರೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಆದೇಶದಂತೆ ಹೇಳಿಕೆಯನ್ನು ಗಣಕೀಕೃತಗೊಳಿಸಿರುತ್ತೇನೆ. ಚಾಸಾ 1 ಹಾಗೂ ಚಾಸಾ 25 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಅವರು ತನಿಖೆಯನ್ನು ಮಾಡಿ ಪ್ರಕರಣವನ್ನು ದಾಖಲಿಸಿದಂತಹ ಸಂದರ್ಭದಲ್ಲಿ ನಾವು ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯಬೇಕು ಎಂದರೆ ಸರಿ. ಪ್ರಕರಣದ ದಾಖಲುಪಡಿಸಿದ ಬಗ್ಗೆ ಹಾಗೂ ತನಿಖಾ ಸತ್ಯಾಸತ್ಯತೆ ನಮಗೆ ತಿಳಿದಿರುವುದಿಲ್ಲ ಎಂದರೆ ಸರಿ.

ನಮ್ಮ ಠಾಣೆಯಲ್ಲಿ ಯಾವ ಯಾವ ರೆಸಾರ್ಟಗಳ ಪ್ರಭಾರವನ್ನು ಯಾರು ಯಾರು ಹೊಂದಿದ್ದಾರೆ ಎಂಬ ಬಗ್ಗೆ ವಹಿಗಳು ಇರುತ್ತವೆ ಎಂದರೆ ಸರಿ. ದಾಳಿಯ ಸಂದರ್ಭದಲ್ಲಿ ಸಿಕ್ಕಂತಹ ವ್ಯಕ್ತಿಗಳು ನನ್ನ ಮೇಲಾಧಿಕಾರಿಗಳಿಗೆ ದೂರು ನೀಡಿದ ವಿಷಯ ನನಗೆ ತಿಳಿದಿಲ್ಲ. ಘಟನೆ ನಡೆದಿದೆ ಎನ್ನಲಾದ ದಿನ ಘಟನಾ ಸ್ಥಳಕ್ಕೆ ಯಾರು ಯಾರು ಪ್ರವಾಸಿಗಳು ಬಂದು ಹೋಗಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಮು.ಮಾ 1 ರಿಂದ 3 ಯಾವುದೇ ಆರೋಪಿತರ ವಶದಲ್ಲಿ ಇರಲಿಲ್ಲ ಎಂದರೆ ಸರಿ.

ಚಾಸಾ 1 ಹಾಗೂ 25 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ನಾನು ಅವರು ದಾಖಲಿಸಿದ ಹಾಗೂ ತನಿಖೆ ಮಾಡಿದ ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3ನೇ ಆರೋಪಿತರು ಯಾವುದೇ ಗುನ್ನೆಯನ್ನು ಎಸಗಲಿಲ್ಲ ಎಂದರೆ ಸರಿಯಲ್ಲ. ಕಾಮತ್ ಫಾರ್ಮ ಹೌಸ್ ಎಂಬುವುದು ಗೋಕರ್ಣ ಪರಿಸರದಲ್ಲಿ ಇಲ್ಲ ಎಂದರೆ ಸರಿಯಲ್ಲ. 3ನೇ ಆರೋಪಿತನು ಘಟನಾ ಸ್ಥಳವನ್ನು ನೋಡಿಕೊಳ್ಳುವವನು ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ**